**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಕ್ರಿ ಮೊ ಸಂಖ್ಯೆ 757/2019</u>**

**<u>ಪಿರ್ಯಾದಿಃ</u>** **ಶ್ರೀ ಟಿ.ಬಿ. ಬಸವರಾಜಪ್ಪ (ಮರಣಹೊಂದಿರುತ್ತಾರೆ)**
**ಪ್ರತಿನಿಧಿಸುವವರುಃ ಶ್ರೀಮತಿ ಮಂಜಮ್ಮ ಮತ್ತು ಇತರರು**

**-ವಿರುದ್ಧ-**

**<u>ಆರೋಪಿ/ತರುಃ</u>** **ಶ್ರೀ ಶಮಿ ಅಹಮ್ಮದ್**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿಆರೋಪಿಯ ಹೇಳಿಕೆ</u>**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲ್ಯೂ-1 ಶ್ರೀ ಟಿ.ಬಿ.ಬಸವರಾಜಪ್ಪ ಹಾಗೂ ಮೃತ ಶ್ರೀ ಟಿ.ಬಿ.ಬಸವರಾಜಪ್ಪ ರವರ ವಾರಸುದಾರರಾದ ಪಿಡಬ್ಲ್ಯೂ-2 ಶ್ರೀಮತಿ ಮಂಜಮ್ಮ ರವರುಗಳು ತಮ್ಮಗಳ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಗೃಹಕೃತ್ಯದ ಉದ್ದೇಶಕೋಸ್ಕರ ದಿನಾಂಕ 15.05.2019 ರಂದು ರೂ.3,00,000/- ಗಳನ್ನು ಪಡೆದು ಸದರಿ ಹಣವನ್ನು ಒಂದು ತಿಂಗಳ ಒಳಗಾಗಿ ಶೇಕಡ 1% ರಂತೆ ಬಡ್ಡಿಯನ್ನು ಸೇರಿಸಿ ವಾಪಸ್ಸು ನೀಡುತ್ತೇನೆಂದು ಹೇಳಿ, ಅದೇದಿನ 15.06.2019 ರ ದಿನಾಂಕವನ್ನು ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಜಿ.ಸರ್ಕಲ್ ಶಾಖೆ, ತರೀಕೆರೆಗೆ ಸೇರಿದ ಚೆಕ್ ಸಂಖ್ಯೆ 041402 ನ್ನು ರೂ.3,00,000/- ಗಳಿಗೆ ನೀಡಿದ್ದು, ನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಜಿ.ಸರ್ಕಲ್ ಶಾಖೆ, ತರೀಕೆರೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ 'Funds Insufficient' ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು

ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ False

ಪ್ರಶ್ನೆ-3: ಪಿಡಬ್ಲೂ-1 ಮತ್ತು ಪಿಡಬ್ಲೂ-2 ರವರುಗಳು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿಡಬ್ಲೂ-1 ರವರು ದಿನಾಂಕ 23.07.2019 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ಪಡೆಯದೆ ನಿರಾಕರಿಸಿರುತ್ತೀರಿ ಮತ್ತು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ Fale

ಪ್ರಶ್ನೆ-4: ಪಿಡಬ್ಲೂ-1 ಮತ್ತು ಪಿಡಬ್ಲೂ-2 ರವರುಗಳು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರ: False

ಪ್ರಶ್ನೆ-5: ನೀವು ಏನಾದರೂ ಹೇಳುವುದಿದೆಯಾ ?

ಉತ್ತರ: Not at this moment

ಪ್ರಶ್ನೆ-6: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 12.11.2025

ಸಹಿ/-

**(ರಾಹುಲ್ ಶೆಟ್ಟಿಗಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**